ಕರ್ನಾಟಕ ಸರ್ಕಾರ

# ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು – 560001.
ದೂರವಾಣಿ: 080–22215601, ಫ್ಯಾಕ್ಸ್ : 22215602

ಸಂಖ್ಯೆ:ಕಕ್ರೀಪ್ರಾ/ಸಿ5/79/2024–25 ದಿನಾಂಕ: 18.09.2025

## ಪತ್ರಿಕಾ ಪ್ರಕಟಣೆ

ಕ್ರೀಡಾ ವಸತಿ ನಿಲಯದ ಕ್ರೀಡಾಪಟುಗಳಿಗೆ ಮಾರ್ಗದರ್ಶನ ನೀಡಲು ಮತ್ತು ಕ್ರೀಡಾ ಮೂಲಭೂತ ಸೌಕರ್ಯಗಳ ಅಭಿವೃದ್ಧಿ / ನಿರ್ವಹಣೆ ಸಂಬಂಧ ಮಾರ್ಗದರ್ಶನ ನೀಡುವ ಸಲುವಾಗಿ ನಾಲ್ಕು ವಿಭಾಗಗಳಿಗೆ ತಲಾ ವಿಭಾಗಕ್ಕೆ ಒಬ್ಬರಂತೆ ಮತ್ತು ವಿದ್ಯಾನಗರ ತರಬೇತಿ ಕೇಂದ್ರ ಹಾಗೂ ಕೊಡಿಗೆ ಕ್ರೀಡಾ ಶಾಲೆ ವಸತಿ ನಿಲಯಕ್ಕೆ ಒಬ್ಬರಂತೆ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿರುವ ಅಥವಾ ಕಾಮನ್ ವೆಲ್ತ್ ಮತ್ತು ಏಷಿಯನ್ ಗೇಮ್ಸ್ ಗಳಲ್ಲಿ ಭಾಗವಹಿಸಿ ಪದಕ ವಿಜೇತರಾದ ಕ್ರೀಡಾಪಟುಗಳ ಸೇವೆಯನ್ನು ಮಾರ್ಗದರ್ಶಕರಾಗಿ ಸೇವೆ ಪಡೆಯಲು ಉದ್ದೇಶಿಸಲಾಗಿದೆ. ಈ ಸಂಬಂಧ ಭಾರತದ ಅರ್ಹ ನಾಗರಿಕರಿಂದ ಅರ್ಜಿಯನ್ನು ಆಹ್ವಾನಿಸಿದೆ.

ಕ್ರೀಡಾ ವಸತಿ ನಿಲಯ : 1) ಬೆಂಗಳೂರು ನಗರ ವಿಭಾಗ : 01, 2) ಬೆಳಗಾವಿ ವಿಭಾಗ : 01, 3) ಕಲ್ಬುರ್ಗಿ ವಿಭಾಗ : 01, 4) ಮೈಸೂರು ವಿಭಾಗ : 01, 5) ಕೊಡಿಗೆ ಕ್ರೀಡಾ ಶಾಲೆ–ವಸತಿ ನಿಲಯ : 01, 6) ವಿದ್ಯಾನಗರ ತರಬೇತಿ ಕೇಂದ್ರ : 01

ಅರ್ಜಿ ಮತ್ತು ಇನ್ನಿತರೆ ಪೂರಕ ದಾಖಲೆಗಳನ್ನು ದಿನಾಂಕ 12–10–2025 ರಂದು ಸಂಜೆ 4.00 ಗಂಟೆಯೊಳಗೆ ಮಹಾ ನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560001 ಇವರಿಗೆ ಸಲ್ಲಿಸಬೇಕಾಗಿರುತ್ತದೆ. ಮಾಸಿಕ ಗೌರವಧನ, ಅರ್ಹತೆ ಮಾನದಂಡ ವಿವರಗಳು ಮತ್ತು ಅರ್ಜಿ ನಮೂನೆ ಹಾಗೂ ಅಧಿಸೂಚನೆಯನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವೆಬ್ ಸೈಟ್ **dyes.karnataka.gov.in** ನಲ್ಲಿ ಮತ್ತು ಹೆಚ್ಚಿನ ಮಾಹಿತಿಯನ್ನು ಮೇಲೆ ತಿಳಿಸಿರುವ ಕಾರ್ಯಾಲಯದಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/–

ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಹಾಗೂ ಮಹಾ ನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ, ಬೆಂಗಳೂರು

DIPR/CP/2871/Zen/2025-26